# ಎನ್‌ಐಟಿಕೆ ಕನ್ನಡ ರಾಜ್ಯೋತ್ಸವ

ಸಂ. ಕ. ಸಮಾಚಾರ, ಮಂಗಳೂರು

ಸುರತ್ಕಲ್ ಎನ್‌ಐಟಿಕೆಯ ಕನ್ನಡ ವೇದಿಕೆಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ದಶಕಗಳಿಂದ ಕನ್ನಡ ರಾಜ್ಯೋತ್ಸವವನ್ನು 'ಪರ್ವ' ಎಂಬ ಹೆಸರಿನಲ್ಲಿ ಕನ್ನಡ ವೇದಿಕೆ ಆಚರಿಸುತ್ತಾ ಬಂದಿದೆ.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಯಕ್ಷಗಾನ, ಭರತನಾಟ್ಯ ಮತ್ತು ಹಳೆಯ ಸಿನಿಮಾ ಹಾಡುಗಳನ್ನು ಮತ್ತು ನೃತ್ಯವನ್ನು ಪ್ರದರ್ಶಿಸಿದರು. ಹಲವಾರು ಸಾಂಸ್ಕೃತಿಕ, ಸಾಹಿತ್ಯ ಸ್ಪರ್ಧೆಗಳನ್ನು ಮತ್ತು ನವೆಂಬರ್ 1ನೇ ತಾರೀಖಿನಂದು ಕನ್ನಡ ಸಂಗೀತ ರಸಸಂಜೆಯನ್ನು ಬೆಂಗಳೂರಿನ ದ ಸ್ಟೆಕೇಟೋ ಕೆಫೆ ತಂಡ ನಡೆಸಿಕೊಟ್ಟಿತು.

ಅದ್ದೂರಿ ಸಂಭ್ರಮಾಚರಣೆಯು ತಾಯಿ ಭುವನೇಶವರಿಯ ಮೆರವಣಿಗೆಯೊಂದಿಗೆ ಆರಂಭಗೊಂಡಿತು. ಹಿರಿಯ ಚಿಂತಕರಾದ ಪ್ರೊ. ಗುರುರಾಜ ಕರಜಗಿ ಮತ್ತು ವಿಶೇಷ ಆಹ್ವಾನಿತ ಗಾಯಕ ನಕುಲ್ ಅಭಯಂಕರ್ ಚಾಲನೆ ನೀಡಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಎನ್‌ಐಟಿಕೆ ಪ್ರಭಾರಿ ನಿರ್ದೇಶಕ ಪ್ರೊ. ಜಿ ಸಿ ಮೋಹನ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು, ಪ್ರೊ. ನರೇಂದ್ರನಾಥ ಎಸ್, ಡಾ. ರವಿರಾಜ್ ಎಚ್ ಮೂಲಂಗಿ, ವಿದ್ಯಾರ್ಥಿ ಸಂಚಾಲಕ ಉಪಸ್ಥಿತರಿದ್ದರು.

ಎನ್‌ಐಟಿಕೆ ಪ್ರಾಧ್ಯಪಕ ವೃಂದದವರು, ಭೋದಕೇತರ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ರಾಜ್ಯೋತ್ಸವ ಸಮಾರಂಭವನ್ನು ಉದ್ಘಾಟನೆ ಮಾಡಲಾಯಿತು.

Udayavani, Date:09/11/22 p, no Sudin- 02